ನಾಲ್ಕು ಲೈನ್‌ಗಳ ರಸ್ತೆ ಅಭಿವೃದ್ಧಿ ಪಡಿಸುವ ಬಗ್ಗೆ

೧೦೨. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ —

ಅ) ಕೃಷ್ಣರಾಜಪುರಂ ರೈಲ್ವೆ ಸ್ಟೇಷನ್‌ನಿಂದ ವೈಟ್‌ಫೀಲ್ಡ್ ಹೋಪ್ ಫಾರಂ ವರೆಗೆ ನಾಲ್ಕು ಲೈನ್ ರಸ್ತೆಯಾಗಿ ಅಭಿವೃದ್ಧಿಪಡಿಸುವ ಕಾರ್ಯ ವಿಳಂಬವಾಗಲು ಕಾರಣಗಳೇನು ;

ಆ) ಇನ್ನೆಷ್ಟು ಅವಧಿಯಲ್ಲಿ ಈ ರಸ್ತೆ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ;

ಇ) ಹಾಗೂ ಇದರ ಅಂದಾಜು ವೆಚ್ಚವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ರಸ್ತೆಯ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲು ಗುತ್ತಿಗೆ ಪ್ರಕಟಣೆ ಹೊರಡಿಸಿ, ಗುತ್ತಿಗೆ ಸ್ವೀಕರಿಸಲು ದಿನಾಂಕ ೨೧-೬-೧೯೬೦ ರಂದು ಕೊನೆಯ ದಿನಾಂಕವಾಗಿ ನಿಗದಿಪಡಿಸಿರುತ್ತದೆ. ಗುತ್ತಿಗೆದಾರರ ತೀರ್ಮಾನದ ನಂತರ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಆ) ಗುತ್ತಿಗೆ ತೀರ್ಮಾನವಾದ ನಂತರ ಕೆಲಸವನ್ನು ಪೂರ್ತಿಸಲು ೩ ವರ್ಷಗಳ ಕಾಲಾವಧಿ ಬೇಕಾಗುತ್ತದೆ.

ಇ) ಈ ರಸ್ತೆಯ ವಿಸ್ತರಣೆ ಕಾರ್ಯಕ್ಕೆ ೪೬ ಲಕ್ಷ ರೂಪಾಯಿಗಳ ಅಂದಾಜು ಬರುತ್ತದೆ.

ಕೃಷ್ಣರಾಜಸಾಗರದ ಬೃಂದಾವನದ ವೀಕ್ಷಕ ಶುಲ್ಕದ ಬಗ್ಗೆ

೧೦೩. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೯-೬೦ರ ಸಾಲಿನಲ್ಲಿ ಕೃಷ್ಣರಾಜಸಾಗರದ ಬೃಂದಾವನವನ್ನು ವೀಕ್ಷಿಸಲು ಬಂದವರಿಂದ ವಸೂಲಾದ ಹಣವೆಷ್ಟು ?

ಆ) ೧೯೬೯-೬೦ರ ಸಾಲಿನಲ್ಲಿ ಕೃಷ್ಣರಾಜಸಾಗರದ ಬೃಂದಾವನದ ಅಭಿವೃದ್ಧಿಗಾಗಿ ಮಾಡಿದ ವೆಚ್ಚ ಎಷ್ಟು ?

ಇ) ೧೯೬೯-೬೦ರ ಸಾಲಿನಲ್ಲಿ ಕೃಷ್ಣರಾಜಸಾಗರದ ಬೃಂದಾವನದ ಅಧಿಕಾರಿಗಳ-ಸಿಬ್ಬಂದಿ ವರ್ಗದವರ ಸಂಬಳ ಇತರೆ ಭತ್ಯೆಗಳಿಗೆಂದು ಖರ್ಚಾದ ಒಟ್ಟು ಹಣವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೯೪.೦೮ ಲಕ್ಷ ರೂಪಾಯಿಗಳು.

ಆ) ೭೯.೬೪ ಲಕ್ಷ ರೂಪಾಯಿಗಳು.

ಇ) ೨೬.೦೪ ಲಕ್ಷ ರೂಪಾಯಿಗಳು.

ರಾಜ್ಯ ಸರ್ಕಾರಿ ನೌಕರರಿಗೆ ಬಸ್ ಪಾಸ್ ಸೌಲಭ್ಯ ಕುರಿತು

೧೦೪. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರಿ ನೌಕರರಿಗೆ ಬಸ್‌ನಲ್ಲಿ ಪ್ರಯಾಣಿಸಲು ಬಸ್ ಪಾಸ್ ಸೌಲಭ್ಯ ಒದಗಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಆ) ಸರ್ಕಾರಿ ನೌಕರರಿಗೆ ಬಸ್ ಪಾಸ್ ಸೌಲಭ್ಯ ಒದಗಿಸದಿರಲು ಕಾರಣಗಳೇನು ?

ಇ) ರಾಜ್ಯ ಸರ್ಕಾರಿ ನೌಕರರಿಗೆ ಎಂದಿನಿಂದ ಬಸ್ ಪಾಸ್ ಸೌಲಭ್ಯ ಒದಗಿಸಿಕೊಡಲಾಗುವುದು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರ ಹಾಗೂ ನೌಕರರ ಸಂಘಗಳ ನಡುವೆ ಒಡಂಬಡಿಕೆಯಾಗಬೇಕಾಗಿದೆ. ಇದಾದ ನಂತರವೇ ಇತರ ಮಾಹಿತಿಗಳು ಹಾಗೂ ಸಾರಿಗೆ ಸಂಸ್ಥೆಗೆ ಉಂಟಾಗುವ ನಷ್ಟದ ಬಗ್ಗೆ ಅಂತಿಮ ನಿರ್ಣಯವಾಗಬೇಕಾಗಿದೆ.

ಇ) ಬಸ್ ಪಾಸ್ ಸೌಲಭ್ಯವನ್ನು ನಗರ ಸಾರಿಗೆಯಲ್ಲಿ ಒದಗಿಸುವುದರಿಂದ ಸಾರಿಗೆ ಸಂಸ್ಥೆಗೆ ತಗಲುವ ನಷ್ಟವನ್ನು ತುಂಬಿಕೊಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಇಲಾಖೆಯ ಲಾಭ ನಷ್ಟ

೩೭೮. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸಾರಿಗೆ ಇಲಾಖೆಯಲ್ಲಿ ೧೯೮೭–೮೮, ೧೯೮೮-೮೯, ೧೯೮೯–೯೦ರಲ್ಲಿ ಆದ ಲಾಭ ಅಥವಾ ನಷ್ಟಗಳೆಷ್ಟು ?

ಆ) ಒಂದು ವೇಳೆ ನಷ್ಟವಾದರೆ ಆ ರೀತಿಯಾಗಲು ಕಾರಣಗಳೇನು ?

ಇ) ಅನಾವಶ್ಯಕವಾಗಿ ಈ ಇಲಾಖೆಯಲ್ಲಿ ಸೋರಿಹೋಗುತ್ತಿರುವುದನ್ನು ನಿಲ್ಲಿಸಲು ಕಟ್ಟಿನಿಟ್ಟಿನ ಕಾರ್ಯಗಳನ್ನು ಸರ್ಕಾರ ಕೈಗೊಂಡಿರುವುದೇ ?

ಈ) ಹಾಗಿದ್ದಲ್ಲಿ ಆ ಕ್ರಮಗಳಾವುವು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿರುವ ನಷ್ಟ ಈ ಕೆಳಕಂಡಂತಿದೆ :

	ಲಕ್ಷ ರೂ.ಗಳಲ್ಲಿ
೧೯೮೭–೮೮ರಲ್ಲಿ	೪೯೯.೫೯
೧೯೮೮–೮೯ರಲ್ಲಿ	೫೪೦.೦೫
೧೯೮೯–೯೦ರಲ್ಲಿ	೪೪೪೬.೦೦ (ಅಂದಾಜು)

ಆ) ನಷ್ಟಕ್ಕೆ ಸಂಬಂಧಪಟ್ಟ ಹಲವು ಮುಖ್ಯ ಕಾರಣಗಳನ್ನು ಈ ಕೆಳಗೆ ವಿವರಿಸಲಾಗಿದೆ :

೧) ಇಂಧನ, ಬಿಡಿಭಾಗಗಳು, ಟೈರುಗಳು ಮುಂತಾದ ಸಾಮಗ್ರಿಗಳ ಬೆಲೆಗಳಲ್ಲಿ ಕಾಲದಿಂದ ಕಾಲಕ್ಕೆ ಆಗಿರುವ ಹೆಚ್ಚಳ.

೨) ರಾಜ್ಯ ಸರ್ಕಾರವು ಘೋಷಿಸಿದ ರೀತ್ಯ, ಕಾಲದಿಂದ ಕಾಲಕ್ಕೆ ಸಿಬ್ಬಂದಿ ವರ್ಗದವರಿಗೆ ನೀಡಲಾಗಿರುವ ತುಟ್ಟಿ ಭತ್ಯಗಳು.

೩) ಕಾರ್ಮಿಕ ಒಕ್ಕೂಟ ಒಡಂಬಡಿಕೆ ಮೇರೆಗೆ ೩–೪ ವರ್ಷಗಳಿಗೊಮ್ಮೆ ಉಂಟಾಗಿರುವ ಸಿಬ್ಬಂದಿ ವರ್ಗದ ವೇತನ ಪರಿಷ್ಕರಣ.

೪) ವಿದ್ಯಾರ್ಥಿಗಳಿಗೆ, ಪತ್ರಕರ್ತರಿಗೆ, ಅಂಧರಿಗೆ, ವಯೋವೃದ್ಧರಿಗೆ ಹಾಗೂ ವಿವಿಧ ರೀತಿಯ ಪ್ರಯಾಣಿಕರಿಗೆ ಉಚಿತ ಪ್ರಯಾಣ ಸೌಲಭ್ಯ ಹಾಗೂ ಸಾರಿಗೆ ದರದಲ್ಲಿನ ರಿಯಾಯಿತಿಗಳು.

೫) ಸಂಸ್ಥೆಯು ಸತತವಾಗಿ ಅನುಭವಿಸುತ್ತಿರುವ ನಷ್ಟದಿಂದಾಗಿ ಆಂತರೀಕ ಸಂಪನ್ಮೂಲಗಳ ಕೊರತೆ ತತ್ಪರಿಣಾಮವಾಗಿ ವಿವಿಧ ವಾಣಿಜ್ಯ ಬ್ಯಾಂಕುಗಳಿಂದ ಸಾಲಿಯಾನ ಶೇಕಡ ೧೪ ರಿಂದ ೧೬ರವರೆಗಿನ ಬಡ್ಡಿಯಂ ದರದಂತೆ ಪಡೆದ ಸಾಲದ ಮೇಲೆ ತೆರಬೇಕಾದ ಬಡ್ಡಿಯ ಹೊರೆ.

೬) ವಾಹನ ತೆರಿಗೆಗಳ ದರಗಳಲ್ಲಿ ಹೆಚ್ಚಳ.

೭) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಂದು ಸಾರ್ವಜನಿಕ ಉದ್ದಿಮೆಯಾಗಿದ್ದು, ಸಂಸ್ಥೆಯ ನೌಕರರಿಗೆ ಉತ್ತಮ ಸಂಬಳ ಭತ್ಯೆಗಳನ್ನು ನೀಡುವ ಪ್ರಯಾಣಿಕರ ಸೌಕರ್ಯಕ್ಕಾಗಿ ಬಸ್ ನಿಲ್ದಾಣ ತಂಗುದಾಣಗಳು ಮುಂತಾದವುಗಳನ್ನು ಒದಗಿಸುವ ಅಲ್ಲದೆ ವಿದ್ಯಾರ್ಥಿ